ಕರ್ನಾಟಕ ಸರ್ಕಾರ

(ಸಾರಿಗೆ ಇಲಾಖೆ)

ಸಂ:ಸಾಆ:ನೋಂದಣಿ-2/ಪಿಆರ್-111/14-15

ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ರವರ ಕಛೇರಿ,
'ಎ' ಬ್ಲಾಕ್, 1ನೇ ಮಹಡಿ, ಟಿ.ಟಿ.ಎಂ.ಸಿ. ಕಟ್ಟಡ,
ಬಿ.ಎಂ.ಟಿ.ಸಿ. ಸಂಕೀರ್ಣ, ಶಾಂತಿನಗರ,
ಬೆಂಗಳೂರು, ದಿನಾಂಕ :12-01-2015

# ಅಧಿಸೂಚನೆ

ವಿಷಯ : ಕರ್ನಾಟಕ ಮೋಟಾರು ವಾಹನ ನಿಯಮಾವಳಿ-1989ಕ್ಕೆ ತಿದ್ದುಪಡಿ ಮಾಡಿ ನಿಯಮ-46(AA)ನ್ನು ಸೇರ್ಪಡೆ ಮಾಡಿ, ಸರ್ಕಾರವು ಹೊರಡಿಸಿರುವ ಅಧಿಸೂಚನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ : ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಾರಿಇ/60/ಸಾಇಪ/2014, ದಿನಾಂಕ:29.05.2014 ಮತ್ತು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿರುವ ದಿ:07.08.2014.

*****

ಉಲ್ಲೇಖದಲ್ಲಿ ಕಾಣಿಸಿರುವ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ-46(A)ಕ್ಕೆ ತಿದ್ದುಪಡಿ ಮಾಡಿ ನಿಯಮ-46(AA) ಅನ್ನು ಸೇರ್ಪಡೆ ಮಾಡಲಾಗಿರುತ್ತದೆ. ಸದರಿ ತಿದ್ದುಪಡಿ ನಿಯಮದ ಪ್ರಕಾರ, ಮೋಟಾರು ವಾಹನಕ್ಕೆ ನೋಂದಣಿ ಸಂಖ್ಯೆ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ, ಯಾವುದೇ ಒಂದು ಆಯ್ಕೆ ನೋಂದಣಿ ಸಂಖ್ಯೆಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳು ಸ್ವೀಕೃತಿಗೊಂಡಾಗ ಹರಾಜು ಪದ್ಧತಿ ಮೂಲಕ ಹಂಚಿಕೆ ಮಾಡಲು ಕಾರ್ಯವಿಧಾನವನ್ನು ರೂಪಿಸಲು ಸಾರಿಗೆ ಆಯುಕ್ತರಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿರುತ್ತದೆ.

ಮೇಲ್ಕಂಡ ತಿದ್ದುಪಡಿ ನಿಯಮದಲ್ಲಿ ನಿರ್ದಿಷ್ಟಪಡಿಸಿರುವ ನೋಂದಣಿ ಸಂಖ್ಯೆಗಳನ್ನೊಳಗೊಂಡಂತೆ ಯಾವುದೇ ಶ್ರೇಣಿಯಲ್ಲಿ ನೋಂದಣಿ ಸಂಖ್ಯೆ :0001 ರಿಂದ 9999ರವರೆಗಿನ ಲಭ್ಯವಿರುವ ಎಲ್ಲಾ ಸಂಖ್ಯೆಗಳನ್ನು ಹರಾಜು ಪ್ರಕ್ರಿಯೆ ವ್ಯಾಪ್ತಿಗೆ ಒಳಪಡಿಸಿ ಅಧಿಸೂಚಿಸಲಾಗಿದೆ.

ಯಾವುದೇ ಆಯ್ಕೆ ನೋಂದಣಿ ಸಂಖ್ಯೆಯನ್ನು ಕಾಯ್ದಿರಿಸಲು, ಚಾಲ್ತಿ ಶ್ರೇಣಿಯಲ್ಲಿ ಮತ್ತು ಮುಂಗಡ ಶ್ರೇಣಿಯಲ್ಲಿ ಪಾವತಿಸಬೇಕಾದ ಶುಲ್ಕವನ್ನು ಈಗಾಗಲೇ ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ-46(A)(1)ನಲ್ಲಿ ನಿಗದಿಪಡಿಸಲಾಗಿರುತ್ತದೆ. ಆದರೆ, ಉಲ್ಲೇಖದಲ್ಲಿ ಕಾಣಿಸಿರುವ ಅಧಿಸೂಚನೆಯ ಪ್ರಕಾರ, ಲಭ್ಯವಿರುವ ಯಾವುದೇ ಆಯ್ಕೆ ನೋಂದಣಿ ಸಂಖ್ಯೆಯನ್ನು ಪಡೆಯಲು ಒಂದೇ ಸಂಖ್ಯೆಗೆ ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳು ಅರ್ಜಿಗಳನ್ನು ಸಲ್ಲಿಸಿದಾಗ, ಹರಾಜು ಪ್ರಕ್ರಿಯೆ ಮೂಲಕ ಅಂತಹ ಸಂಖ್ಯೆಯನ್ನು ಪಡೆಯಲು ಇಚ್ಛಿಸುವ ವ್ಯಕ್ತಿಯು ಹರಾಜಿನಲ್ಲಿ ಭಾಗವಹಿಸಿ ಯಶಸ್ವಿ ಬಿಡ್ಡುದಾರನಾದಲ್ಲಿ, ನಿಯಮ-46(A)(1)ನಲ್ಲಿ ನಿಗದಿಪಡಿಸಿದ ಶುಲ್ಕವನ್ನು ಮತ್ತು ಬಿಡ್‌ನಲ್ಲಿ ನಮೂದಿಸಿದ ಮೊತ್ತವನ್ನೂ ಸಹ ಪಾವತಿಸಬೇಕಾಗುತ್ತದೆ.

--2

ಆದ್ದರಿಂದ, ಮೇಲ್ಕಂಡಂತೆ ಚಾಲ್ತಿ ಶ್ರೇಣಿಯಲ್ಲಿ ಮತ್ತು ಮುಂಗಡ ಶ್ರೇಣಿಯಲ್ಲಿ ಸಾರಿಗೇತರ ಲಘು ಮೋಟಾರು ವಾಹನಗಳಿಗೆ (ಕಾರು, ಜೀಪು, ಸ್ವಂತ ಉಪಯೋಗಕ್ಕೆ ಬಳಸುವ ಖಾಸಗಿ ಸೇವಾ ವಾಹನಗಳು ಇತ್ಯಾದಿ) ಸಂಬಂಧಿಸಿದಂತೆ ಮಾತ್ರ, ಆಯ್ಕೆ ನೋಂದಣಿ ಸಂಖ್ಯೆಗಳನ್ನು ಹರಾಜು ಪ್ರಕ್ರಿಯೆ ಮೂಲಕ ಹಂಚಿಕೆ ಮಾಡುವ ಕ್ರಮವನ್ನು ಈ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ತರಲಾಗಿದೆ.

ನಿಯಮ-46(A)(1)ರ ಪ್ರಕಾರ, ಆಯಾ ಪ್ರಾದೇಶಿಕ /ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯಲ್ಲಿ ಆಯಾ ದಿನ ಪ್ರಾರಂಭದಲ್ಲಿ ಲಭ್ಯವಿರುವ ಸಂಖ್ಯೆಯಿಂದ 1000 ವರೆಗಿನ ಸಂಖ್ಯೆಗಳನ್ನು ಹಂಚಿಕೆ ಮಾಡಲು ಪ್ರಾದೇಶಿಕ /ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಅಧಿಕಾರವನ್ನು ಹೊಂದಿರುತ್ತಾರೆ. ಚಾಲ್ತಿ ಶ್ರೇಣಿಯ ತದನಂತರದ ಸಂಖ್ಯೆಗಳನ್ನು ಹಾಗೂ ಮುಂಗಡ ಶ್ರೇಣಿಯಲ್ಲಿ ಲಭ್ಯವಿರುವ ಸಂಖ್ಯೆಗಳನ್ನು ಸಾರಿಗೆ ಆಯುಕ್ತರ ಕಛೇರಿಯಲ್ಲಿ ಹಂಚಿಕೆ ಮಾಡಲಾಗುತ್ತದೆ.

ಆಯ್ಕೆ ನೋಂದಣಿ ಸಂಖ್ಯೆಗಳನ್ನು ಹರಾಜು ಪದ್ಧತಿಯ ಮೂಲಕ ಪ್ರಾದೇಶಿಕ /ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯಲ್ಲಿ ಮತ್ತು ಸಾರಿಗೆ ಆಯುಕ್ತರ ಕಛೇರಿಯಲ್ಲಿ ಹಂಚಿಕೆ ಮಾಡಲು ಅನುಕ್ರಮವಾಗಿ ಪಾಲಿಸಬೇಕಾದ ಕ್ರಮಗಳನ್ನು ಲಗತ್ತಿಸಿರುವ **ಅನುಬಂಧ-1 ಮತ್ತು 2** ರಲ್ಲಿ ನೀಡಲಾಗಿದೆ.

ಸಹಿ/-
**ಆಯುಕ್ತರು,**
**ಸಾರಿಗೆ ಮತ್ತು ರಸ್ತೆ ಸುರಕ್ಷತೆ,**
**ಬೆಂಗಳೂರು.**

**ಇವರಿಗೆ**
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಸದರಿ ಅಧಿಸೂಚನೆಯನ್ನು ಮುಂದಿನ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 200 ಪ್ರತಿಗಳನ್ನು ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರು, ಬೆಂಗಳೂರು ಇವರಿಗೆ ಕಳುಹಿಸಿಕೊಡುವಂತೆ ಕೋರಲಾಗಿದೆ.

**ಪ್ರತಿಗಳು :**
1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯದ ಎಲ್ಲಾ ಪ್ರಾದೇಶಿಕ/ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಎಲ್ಲಾ ಅಪರ ಮತ್ತು ಜಂಟಿ ಸಾರಿಗೆ ಆಯುಕ್ತರುಗಳಿಗೆ ಮಾಹಿತಿಗಾಗಿ.
4. ಎಲ್ಲಾ ಉಪ ಸಾರಿಗೆ ಆಯುಕ್ತರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
5. ಕಛೇರಿ ಪ್ರತಿ.

## ಅನುಬಂಧ-1

## ನೋಂದಣಿ ಪ್ರಾಧಿಕಾರದಿಂದ ಲಘು ಮೋಟಾರು ವಾಹನ (ಸಾರಿಗೇತರ ವರ್ಗ)ಗಳಿಗೆ ಆಯ್ಕೆ ನೋಂದಣಿ ಸಂಖ್ಯೆ ಹಂಚಿಕೆ ಮಾಡುವ ಕಾರ್ಯವಿಧಾನ.

1. ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 47ರ ಮೇರೆಗೆ ಹೊಸದಾಗಿ ನೋಂದಾಯಿಸುವ ಅಥವಾ ನಿಯಮ 54ರ ಪ್ರಕಾರ ಮರು ನೋಂದಾಯಿಸುವ ಲಘು ಮೋಟಾರು ವಾಹನ (ಸಾರಿಗೇತರ ವರ್ಗ)ಗಳಿಗೆ ಆಯಾ ದಿನ ಪ್ರಾರಂಭವಾಗುವ ಮೊದಲ ನೋಂದಣಿ ಸಂಖ್ಯೆಯಿಂದ ಅಥವಾ ಹಿಂದಿನ ದಿನ ಕೊನೆಯದಾಗಿ ನೀಡಿದ ನೋಂದಣಿ ಸಂಖ್ಯೆಯ ನಂತರ ಅನುಕ್ರಮವಾಗಿ ಪ್ರಾರಂಭಿಸಿ ಮುಂದಿನ 1000 ನೋಂದಣಿ ಸಂಖ್ಯೆಗಳ ಪರಿಮಿತಿಯಲ್ಲಿ ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 46–ಎಎ ಅಡಿ ನಿಗದಿಪಡಿಸಿರುವ ನೋಂದಣಿ ಸಂಖ್ಯೆಗಳೂ ಒಳಗೊಂಡಂತೆ ಯಾವುದೇ ನೋಂದಣಿ ಸಂಖ್ಯೆಯನ್ನು ಹಂಚಿಕೆ ಮಾಡುವ ಅಧಿಕಾರವನ್ನು ನೋಂದಣಿ ಪ್ರಾಧಿಕಾರಗಳಿಗೆ ಪ್ರತ್ಯಾಯೋಜಿಸಿದೆ.
2. ಮೇಲ್ಕಂಡಂತೆ ಯಾವುದೇ ಆಯ್ಕೆ ನೋಂದಣಿ ಸಂಖ್ಯೆಯನ್ನು ಪಡೆಯಲು ಇಚ್ಛಿಸುವ ಅರ್ಜಿದಾರರು ವಾಹನ ಮಾರಾಟಪತ್ರ (ನಮೂನೆ–21)/ ನಮೂನೆ–23 (ಹೊರ ರಾಜ್ಯದ ವಾಹನಗಳ ಮರು ನೋಂದಣಿಗೆ) ರೊಂದಿಗೆ ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ / ಇ–ಮೇಲ್ ವಿಳಾಸ ಮತ್ತು ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 46(ಎ)(1)ರಡಿ ನಿಗದಿಪಡಿಸಿರುವ ಶುಲ್ಕವಾದ ಚಾಲ್ತಿ ಶ್ರೇಣಿಗೆ ರೂ.20,000/– ಮತ್ತು ಮುಂಗಡ ಶ್ರೇಣಿಗೆ ರೂ.75,000/–ಗಳಿಗೆ ಸಂಬಂಧಿಸಿದ ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಹೆಸರಿನಲ್ಲಿ ಪಡೆದ ಡಿಮಾಂಡ್ ಡ್ರಾಫ್ಟ್‌ನೊಂದಿಗೆ ಅರ್ಜಿಯನ್ನು ಬೆಳಿಗ್ಗೆ 11.45ಕ್ಕೂ ಮುಂಚಿತವಾಗಿ ಆಯಾ ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳಲ್ಲಿ ಇರಿಸಿದ ಡ್ರಾಪ್ ಬಾಕ್ಸ್‌ನಲ್ಲಿ ಹಾಕತಕ್ಕದ್ದು.
3. ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 46(ಎ)(1)ರಡಿ ನಿಗದಿಪಡಿಸಿರುವ ಶುಲ್ಕದ ಮೊತ್ತಕ್ಕೆ ಅರ್ಜಿಯೊಂದಿಗೆ ಡಿಮಾಂಡ್ ಡ್ರಾಫ್ಟ್‌ಅನ್ನು ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

ನೋಂದಣಿ ಪ್ರಾಧಿಕಾರವು ಅರ್ಜಿ ಸ್ವೀಕರಿಸಿದ ದಿನದಂದೇ ಮಧ್ಯಾಹ್ನ 12.00 ಗಂಟೆಗೆ ಡ್ರಾಪ್ ಬಾಕ್ಸ್‌ನಲ್ಲಿ ಹಾಕಿರುವ ಅರ್ಜಿಗಳನ್ನು ತೆರೆಯತಕ್ಕದ್ದು. ಆ ಸಮಯದಲ್ಲಿ ಎಲ್ಲಾ ಅರ್ಜಿದಾರರು ಅಥವಾ ಅವರ ಪ್ರತಿನಿಧಿಗಳು ಹಾಜರಿರತಕ್ಕದ್ದು. ಒಂದುವೇಳೆ ಅರ್ಜಿದಾರ ಅಥವಾ ಅವರ ಪ್ರತಿನಿಧಿ ಗೈರುಹಾಜರಾದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಿ ಅವರು ಅರ್ಜಿಯೊಂದಿಗೆ ಸಲ್ಲಿಸಿದ ಡಿಮಾಂಡ್ ಡ್ರಾಫ್ಟನ್ನು ಹಿಂತಿರುಗಿಸತಕ್ಕದ್ದು. ಆಯ್ಕೆ ನೋಂದಣಿ ಸಂಖ್ಯೆಗೆ ಒಂದೇ ಅರ್ಜಿ ಇರುವುದು ಕಂಡುಬಂದಲ್ಲಿ ಅಂತಹ ನೋಂದಣಿ ಸಂಖ್ಯೆಯನ್ನು ಹಂಚಿಕೆ ಮಾಡಿ ಡಿಮಾಂಡ್ ಡ್ರಾಫ್ಟ್ ಮೊತ್ತಕ್ಕೆ ರಸೀದಿ ನೀಡತಕ್ಕದ್ದು.

--2

4. ಯಾವುದೇ ಒಂದು ನಿರ್ದಿಷ್ಟ ನೋಂದಣಿ ಸಂಖ್ಯೆಗೆ ಒಂದಕ್ಕಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ, ಅಂತಹ ಅರ್ಜಿದಾರರಿಗೆ ಸಂಬಂಧಿಸಿದ ಪ್ರಾದೇಶಿಕ/ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಹೆಸರಿನಲ್ಲಿ ಬಿಡ್ ಮಾಡುವ ಮೊತ್ತಕ್ಕೆ ಪಡೆದ ಡಿಮಾಂಡ್ ಡ್ರಾಫ್ಟ್‌ಅನ್ನು ಟೆಂಡರ್ ಅರ್ಜಿಯೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಅದೇ ದಿನ ಮಧ್ಯಾಹ್ನ 1.00 ಗಂಟೆಗೂ ಮೊದಲು ಡ್ರಾಪ್ ಬಾಕ್ಸ್‌ನಲ್ಲಿ ಹಾಕುವಂತೆ ತಿಳಿಸುವುದು.
5. ಡ್ರಾಪ್ ಬಾಕ್ಸ್‌ನಲ್ಲಿ ಸ್ವೀಕೃತಿಯಾದ ಟೆಂಡರ್ ಅರ್ಜಿಗಳನ್ನು ಅದೇ ದಿನ ಮಧ್ಯಾಹ್ನ 01.15ಕ್ಕೆ ತೆರೆಯುವುದು.
6. ನೋಂದಣಿ ಪ್ರಾಧಿಕಾರವು ಹೆಚ್ಚಿನ ಮೊತ್ತ ನಮೂದಿಸಿದ ಬಿಡ್ಡುದಾರರನ್ನು ಮಧ್ಯಾಹ್ನ 1.30ರೊಳಗಾಗಿ ಖಚಿತಪಡಿಸತಕ್ಕದ್ದು ಮತ್ತು ಯಶಸ್ವಿ ಬಿಡ್ಡುದಾರರಿಗೆ ನೋಂದಣಿ ಸಂಖ್ಯೆ ಕಾಯ್ದಿರಿಸುವಿಕೆಯ ಶುಲ್ಕ ಮತ್ತು ಅವರು ನಮೂದಿಸಿದ ಬಿಡ್ ಮೊತ್ತಕ್ಕೆ ಸಲ್ಲಿಸಿದ ಡಿಮಾಂಡ್ ಡ್ರಾಫ್ಟ್‌ಗಳಿಗೆ ರಸೀದಿಯನ್ನು ಅದೇ ದಿನ ನೀಡತಕ್ಕದ್ದು. ಯಶಸ್ವಿಯಾಗದ ಬಿಡ್ಡುದಾರರಿಗೆ ಡಿಮಾಂಡ್ ಡ್ರಾಫ್ಟ್‌ಗಳನ್ನು ಹಿಂತಿರುಗಿಸಿ ಸ್ವೀಕೃತಿ ಪಡೆದು ಕೊಳ್ಳತಕ್ಕದ್ದು. ಈ ದಿಸೆಯಲ್ಲಿ ನೋಂದಣಿ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.
7. ಯಶಸ್ವಿ ಬಿಡ್‌ದಾರನು ನೋಂದಣಿ ಸಂಖ್ಯೆ ಹಂಚಿಕೆ ಮಾಡಿದ ದಿನಾಂಕದಿಂದ 90 ದಿನಗಳ ಒಳಗಾಗಿ ವಾಹನವನ್ನು ನೋಂದಾಯಿಸಿಕೊಳ್ಳತಕ್ಕದ್ದು.
8. ಒಂದು ವೇಳೆ ಯಶಸ್ವಿ ಬಿಡ್ಡುದಾರನು ವಾಹನವನ್ನು ಮೇಲ್ಕಂಡಂತೆ ನಿಗದಿತ ಅವಧಿಯಲ್ಲಿ ನೋಂದಾಯಿಸಿ ಕೊಳ್ಳಲು ವಿಫಲವಾದಲ್ಲಿ, ನೋಂದಣಿ ಸಂಖ್ಯೆ ಕಾಯ್ದಿರಿಸಲು ಪಾವತಿಸಿದ ಶುಲ್ಕ ಮತ್ತು ಬಿಡ್ ಮೊತ್ತವು ಸರ್ಕಾರಕ್ಕೆ ಮುಟ್ಟುಗೋಲಾಗುತ್ತದೆ ಮತ್ತು ಅಂತಹ ನೋಂದಣಿ ಸಂಖ್ಯೆಯು ಪುನರ್-ಹಂಚಿಕೆಗಾಗಿ ಸಾರ್ವಜನಿಕರಿಗೆ ಮುಕ್ತವಾಗುತ್ತದೆ.
9. ಮೇಲ್ಕಂಡ ಕ್ರಮ ಸಂಖ್ಯೆ.2, 4, 5, 6 ಮತ್ತು 7 ರಲ್ಲಿ ನಿಗದಿಪಡಿಸಿರುವ ಸಮಯವು ಸೋಮವಾರದಿಂದ ಶುಕ್ರವಾರದವರೆಗೆ (ಕಾರ್ಯ ನಿರ್ವಹಿಸುವ ದಿನಗಳು) ಮಾತ್ರ ಅನ್ವಯಿಸುತ್ತದೆ ಮತ್ತು ಶನಿವಾರ (ಕಾರ್ಯ ನಿರ್ವಹಿಸುವ ದಿನ) ಈ ಕೆಳಕಂಡ ವೇಳಾಪಟ್ಟಿ ಅನ್ವಯಿಸುತ್ತದೆ.

| | | |
|---|---|---|
| ಅರ್ಜಿಗಳನ್ನು ಸಲ್ಲಿಸುವ ಸಮಯ | : | ಬೆಳಿಗ್ಗೆ 10.30 ಗಂಟೆವರೆಗೆ. |
| ಡ್ರಾಪ್ ಬಾಕ್ಸ್ ತೆರೆಯುವ ಸಮಯ | : | ಬೆಳಿಗ್ಗೆ 11.45 ಗಂಟೆವರೆಗೆ. |
| ಟೆಂಡರ್ ಅರ್ಜಿ ಸಲ್ಲಿಸಲು ಸಮಯ | : | ಬೆಳಿಗ್ಗೆ 11.45 ಗಂಟೆವರೆಗೆ. |
| ಟೆಂಡರ್ ಅರ್ಜಿಗಳನ್ನು ಅಂತಿಮವಾಗಿ ಡ್ರಾಪ್‌ಬಾಕ್ಸ್‌ನಿಂದ ತೆರೆಯುವ ಸಮಯ | : | ಮಧ್ಯಾಹ್ನ 12.00 ಗಂಟೆಗೆ. |
| ಯಶಸ್ವಿ ಬಿಡ್ಡುದಾರನಿಗೆ ಖಚಿತಪಡಿಸುವ ಸಮಯ | : | ಮಧ್ಯಾಹ್ನ 12.15 ಗಂಟೆಗೆ. |
| ಶುಲ್ಕ ಮತ್ತು ಬಿಡ್ ಮೊತ್ತಕ್ಕೆ ರಸೀದಿ ನೀಡುವ ಸಮಯ | : | ಮಧ್ಯಾಹ್ನ 12.30ರೊಳಗಾಗಿ. |

ಸಹಿ/-

**ಆಯುಕ್ತರು, ಸಾರಿಗೆ ಮತ್ತು**
**ರಸ್ತೆ ಸುರಕ್ಷತೆ, ಬೆಂಗಳೂರು**

# ಅನುಬಂಧ-2

## ಸಾರಿಗೆ ಆಯುಕ್ತರಿಂದ ಲಘು ಮೋಟಾರು ವಾಹನ (ಸಾರಿಗೇತರ ವರ್ಗ)ಗಳಿಗೆ ಆಯ್ಕೆ ನೋಂದಣಿ ಸಂಖ್ಯೆ ಹಂಚಿಕೆ ಮಾಡುವ ಕಾರ್ಯವಿಧಾನ.

1. ಯಾವುದೇ ಪ್ರಾದೇಶಿಕ/ ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಲಘು ಮೋಟಾರು ವಾಹನ (ಸಾರಿಗೇತರ ವರ್ಗ) ನೋಂದಣಿಗಾಗಿ ಚಾಲ್ತಿ ಶ್ರೇಣಿಯಲ್ಲಿ ಮತ್ತು ಮುಂಗಡ ಶ್ರೇಣಿಯಲ್ಲಿ 1000 ನೋಂದಣಿ ಸಂಖ್ಯೆಗಳ ಪರಿಮಿತಿ ನಂತರದ ನೋಂದಣಿ ಸಂಖ್ಯೆಗಳನ್ನು ಹಂಚಿಕೆ ಮಾಡುವ ಅಧಿಕಾರವು ಸಾರಿಗೆ ಆಯುಕ್ತರು ಅಥವಾ ಅವರಿಂದ ಅಧಿಕೃತಗೊಂಡ ಅಧಿಕಾರಿಯು ಹೊಂದಿರುತ್ತಾರೆ.
2. ಮೇಲ್ಕಂಡಂತೆ ಯಾವುದೇ ನೋಂದಣಿ ಸಂಖ್ಯೆಯನ್ನು ಪಡೆಯಲು ಇಚ್ಛಿಸುವ ಅರ್ಜಿದಾರರು ವಾಹನ ಮಾರಾಟಪತ್ರ (ನಮೂನೆ-21)/ ನಮೂನೆ-23 (ಹೊರ ರಾಜ್ಯದ ವಾಹನಗಳ ಮರು ನೋಂದಣಿಗೆ) ರೊಂದಿಗೆ ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ / ಇ-ಮೇಲ್ ವಿಳಾಸ ಮತ್ತು ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 46(ಎ)(1)ರಡಿ ನಿಗದಿಪಡಿಸಿರುವ ಶುಲ್ಕವಾದ ಚಾಲ್ತಿ ಶ್ರೇಣಿಗೆ ರೂ.20,000/- ಮತ್ತು ಮುಂಗಡ ಶ್ರೇಣಿಗೆ ರೂ.75,000/-ಗಳಿಗೆ ಕಾರ್ಯದರ್ಶಿ, ರಾಜ್ಯ ಸಾರಿಗೆ ಪ್ರಾಧಿಕಾರ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದ ಡಿಮಾಂಡ್ ಡ್ರಾಫ್ಟ್‌ನೊಂದಿಗೆ ಅರ್ಜಿಯನ್ನು ಬೆಳಿಗ್ಗೆ 11.45ಕ್ಕೂ ಮುಂಚಿತವಾಗಿ ಸಾರಿಗೆ ಆಯುಕ್ತರ ಕಛೇರಿಯಲ್ಲಿ ಇರಿಸಿದ ಡ್ರಾಪ್ ಬಾಕ್ಸ್‌ನಲ್ಲಿ ಹಾಕತಕ್ಕದ್ದು.
3. ಅರ್ಜಿಯೊಂದಿಗೆ ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 46(ಎ)(1)ರಡಿ ನಿಗದಿಪಡಿಸಿರುವ ಶುಲ್ಕದ ಮೊತ್ತಕ್ಕೆ ಡಿಮಾಂಡ್ ಡ್ರಾಫ್ಟ್‌ಅನ್ನು ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.

    ಸಾರಿಗೆ ಆಯುಕ್ತರಿಂದ ಅಧಿಕೃತಗೊಂಡ ಅಧಿಕಾರಿಯವರು ಅರ್ಜಿ ಸ್ವೀಕರಿಸಿದ ದಿನದಂದೇ ಮಧ್ಯಾಹ್ನ 12.00 ಗಂಟೆಗೆ ಡ್ರಾಪ್ ಬಾಕ್ಸ್‌ನಲ್ಲಿ ಹಾಕಿರುವ ಅರ್ಜಿಗಳನ್ನು ತೆರೆಯತಕ್ಕದ್ದು. ಆ ಸಮಯದಲ್ಲಿ ಎಲ್ಲಾ ಅರ್ಜಿದಾರರು ಅಥವಾ ಅವರ ಪ್ರತಿನಿಧಿಗಳು ಹಾಜರಿರತಕ್ಕದ್ದು. ಒಂದುವೇಳೆ ಅರ್ಜಿದಾರ ಅಥವಾ ಅವರ ಪ್ರತಿನಿಧಿ ಗೈರುಹಾಜರಾದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಿ ಅವರು ಅರ್ಜಿಯೊಂದಿಗೆ ಸಲ್ಲಿಸಿದ ಡಿಮಾಂಡ್ ಡ್ರಾಫ್ಟನ್ನು ಹಿಂತಿರುಗಿಸತಕ್ಕದ್ದು. ಆಯ್ಕೆ ನೋಂದಣಿ ಸಂಖ್ಯೆಗೆ ಒಂದೇ ಅರ್ಜಿ ಇರುವುದು ಕಂಡುಬಂದಲ್ಲಿ ಅಂತಹ ನೋಂದಣಿ ಸಂಖ್ಯೆಯನ್ನು ಹಂಚಿಕೆ ಮಾಡಿ ಡಿಮಾಂಡ್ ಡ್ರಾಫ್ಟ್ ಮೊತ್ತಕ್ಕೆ ರಸೀದಿ ನೀಡತಕ್ಕದ್ದು.

4. ಯಾವುದೇ ಒಂದು ನಿರ್ದಿಷ್ಟ ನೋಂದಣಿ ಸಂಖ್ಯೆಗೆ ಒಂದಕ್ಕಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ, ಅಂತಹ ಅರ್ಜಿದಾರರಿಗೆ, ಅವರು ಬಿಡ್ ಮಾಡುವ ಮೊತ್ತಕ್ಕೆ ಕಾರ್ಯದರ್ಶಿ, ರಾಜ್ಯ ಸಾರಿಗೆ ಪ್ರಾಧಿಕಾರ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದ ಡಿಮಾಂಡ್ ಡ್ರಾಫ್ಟ್‌ಅನ್ನು ಟೆಂಡರ್ ಅರ್ಜಿಯೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಅದೇ ದಿನ ಮಧ್ಯಾಹ್ನ 1.00 ಗಂಟೆಗೂ ಮೊದಲು ಡ್ರಾಪ್ ಬಾಕ್ಸ್‌ನಲ್ಲಿ ಹಾಕುವಂತೆ ತಿಳಿಸುವುದು.
5. ಸಾರಿಗೆ ಆಯುಕ್ತರಿಂದ ಅಧಿಕೃತಗೊಂಡ ಅಧಿಕಾರಿಯವರು ಡ್ರಾಪ್ ಬಾಕ್ಸ್‌ನಲ್ಲಿ ಸ್ವೀಕರಿಸಿದ ಟೆಂಡರ್ ಅರ್ಜಿಗಳನ್ನು ಅದೇ ದಿನ ಮಧ್ಯಾಹ್ನ 01.15ಕ್ಕೆ ತೆರೆಯುವುದು.
6. ಸಾರಿಗೆ ಆಯುಕ್ತರಿಂದ ಅಧಿಕೃತಗೊಂಡ ಅಧಿಕಾರಿಯವರು ಹೆಚ್ಚಿನ ಮೊತ್ತದ ಬಿಡ್ಡುದಾರರನ್ನು ಮಧ್ಯಾಹ್ನ 1.30 ರೊಳಗಾಗಿ ಖಚಿತಪಡಿಸತಕ್ಕದ್ದು ಮತ್ತು ಯಶಸ್ವಿ ಬಿಡ್ಡುದಾರರಿಗೆ ನೋಂದಣಿ ಸಂಖ್ಯೆ ಕಾಯ್ದಿರಿಸುವಿಕೆಯ ಶುಲ್ಕ ಮತ್ತು ಅವರು ನಮೂದಿಸಿದ ಬಿಡ್ ಮೊತ್ತಕ್ಕೆ ಸಲ್ಲಿಸಿದ ಡಿಮಾಂಡ್ ಡ್ರಾಫ್ಟ್‌ಗಳಿಗೆ ರಸೀದಿಯನ್ನು ಅದೇ ದಿನ ನೀಡತಕ್ಕದ್ದು. ಯಶಸ್ವಿಯಾಗದ ಬಿಡ್ಡುದಾರರಿಗೆ ಡಿಮಾಂಡ್ ಡ್ರಾಫ್ಟ್‌ಗಳನ್ನು ಹಿಂತಿರುಗಿಸಿ ಸ್ವೀಕೃತಿ ಪಡೆದುಕೊಳ್ಳತಕ್ಕದ್ದು. ಈ ದಿಸೆಯಲ್ಲಿ ಸಾರಿಗೆ ಆಯುಕ್ತರಿಂದ ಅಧಿಕೃತಗೊಂಡ ಅಧಿಕಾರಿಯವರ ತೀರ್ಮಾನವೇ ಅಂತಿಮವಾಗಿರುತ್ತದೆ.
7. ಯಶಸ್ವಿ ಬಿಡ್ಡುದಾರನು ನೋಂದಣಿ ಸಂಖ್ಯೆ ಹಂಚಿಕೆ ಮಾಡಿದ ದಿನಾಂಕದಿಂದ 90 ದಿನಗಳ ಒಳಗಾಗಿ ವಾಹನವನ್ನು ನೋಂದಾಯಿಸಿಕೊಳ್ಳತಕ್ಕದ್ದು.
8. ಒಂದು ವೇಳೆ ಯಶಸ್ವಿ ಬಿಡ್‌ದಾರರು ವಾಹನವನ್ನು ಮೇಲ್ಕಂಡಂತೆ ನಿಗದಿತ ಅವಧಿಯಲ್ಲಿ ನೋಂದಾಯಿಸಿ ಕೊಳ್ಳಲು ವಿಫಲವಾದಲ್ಲಿ, ನೋಂದಣಿ ಸಂಖ್ಯೆ ಕಾಯ್ದಿರಿಸಲು ಪಾವತಿಸಿದ ಶುಲ್ಕ ಮತ್ತು ಬಿಡ್ ಮೊತ್ತವು ಸರ್ಕಾರಕ್ಕೆ ಮುಟ್ಟುಗೋಲಾಗುತ್ತದೆ ಮತ್ತು ಅಂತಹ ನೋಂದಣಿ ಸಂಖ್ಯೆಯು ಪುನರ್-ಹಂಚಿಕೆಗಾಗಿ ಸಾರ್ವಜನಿಕರಿಗೆ ಮುಕ್ತವಾಗುತ್ತದೆ.
9. ಮೇಲ್ಕಂಡ ಕ್ರಮ ಸಂಖ್ಯೆ.2, 4, 5, 6 ಮತ್ತು 7 ರಲ್ಲಿ ನಿಗದಿಪಡಿಸಿರುವ ಸಮಯವು ಸೋಮವಾರದಿಂದ ಶುಕ್ರವಾರದವರೆಗೆ (ಕಾರ್ಯ ನಿರ್ವಹಿಸುವ ದಿನಗಳು) ಮಾತ್ರ ಅನ್ವಯಿಸುತ್ತದೆ ಮತ್ತು ಶನಿವಾರ (ಕಾರ್ಯ ನಿರ್ವಹಿಸುವ ದಿನ) ಈ ಕೆಳಕಂಡ ವೇಳಾಪಟ್ಟಿ ಅನ್ವಯಿಸುತ್ತದೆ.

| | | |
|---|---|---|
| ಅರ್ಜಿಗಳನ್ನು ಸಲ್ಲಿಸುವ ಸಮಯ | : | ಬೆಳಿಗ್ಗೆ 10.30 ಗಂಟೆವರೆಗೆ. |
| ಡ್ರಾಪ್ ಬಾಕ್ಸ್ ತೆರೆಯುವ ಸಮಯ | : | ಬೆಳಿಗ್ಗೆ 11.45 ಗಂಟೆವರೆಗೆ. |
| ಟೆಂಡರ್ ಅರ್ಜಿ ಸಲ್ಲಿಸಲು ಸಮಯ | : | ಬೆಳಿಗ್ಗೆ 11.45 ಗಂಟೆವರೆಗೆ. |
| ಟೆಂಡರ್ ಅರ್ಜಿಗಳನ್ನು ಅಂತಿಮವಾಗಿ ಡ್ರಾಪ್‌ಬಾಕ್ಸ್‌ನಿಂದ ತೆರೆಯುವ ಸಮಯ | : | ಮಧ್ಯಾಹ್ನ 12.00 ಗಂಟೆಗೆ. |
| ಯಶಸ್ವಿ ಬಿಡ್ಡುದಾರನಿಗೆ ಖಚಿತಪಡಿಸುವ ಸಮಯ | : | ಮಧ್ಯಾಹ್ನ 12.15 ಗಂಟೆಗೆ. |
| ಶುಲ್ಕ ಮತ್ತು ಬಿಡ್ ಮೊತ್ತಕ್ಕೆ ರಸೀದಿ ನೀಡುವ ಸಮಯ | : | ಮಧ್ಯಾಹ್ನ 12.30ರೊಳಗಾಗಿ. |

ಸಹಿ/-

**ಆಯುಕ್ತರು, ಸಾರಿಗೆ ಮತ್ತು**
**ರಸ್ತೆ ಸುರಕ್ಷತೆ, ಬೆಂಗಳೂರು**

**ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 46–ಎಎ ಪ್ರಕಾರ ಹರಾಜು ಮೂಲಕ ಆಯ್ಕೆ ನೋಂದಣಿ ಸಂಖ್ಯೆ ಕಾಯ್ದಿರಿಸುವಿಕೆಗಾಗಿ ಟೆಂಡರ್ ಅರ್ಜಿ**

ಇವರಿಗೆ

ಪ್ರಾದೇಶಿಕ /ಸ.ಪ್ರಾದೇಶಿಕ ಸಾರಿಗೆ ಅಧಿಕಾರಿ,

____________________

ಮಾನ್ಯರೆ,

ಈ ಕೆಳಗೆ ಸಹಿ ಮಾಡಿರುವ ನಾನು, ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 46–ಎಎ ಪ್ರಕಾರ ಹರಾಜು ಮೂಲಕ ಲಘು ಮೋಟಾರು ವಾಹನಕ್ಕೆ (ಸಾರಿಗೇತರ ವರ್ಗ) ಆಯ್ಕೆ ನೋಂದಣಿ ಸಂಖ್ಯೆ ಹಂಚಿಕೆಗಾಗಿ ಕೆಳಕಂಡ ವಿವರಗಳೊಂದಿಗೆ ಅರ್ಜಿ ಸಲ್ಲಿಸುತ್ತಿದ್ದೇನೆ.

1. ಅರ್ಜಿದಾರರ ಹೆಸರು : ________________________________
2. ವಿಳಾಸ : ________________________________
________________________________
________________________________
3. ದೂರವಾಣಿ / ಮೊಬೈಲ್ ಸಂಖ್ಯೆ : ________________________________
4. ಇ–ಮೇಲ್ ವಿಳಾಸ : ________________________________
5. ಹಂಚಿಕೆ ಮಾಡಲು ಕೋರಿದ ನೋಂದಣಿ ಸಂಖ್ಯೆ(ಚಾಲ್ತಿ ಅಥವಾ ಆಯ್ಕೆ ಶ್ರೇಣಿ) : ____________________________
6. ಲಗತ್ತಿಸಿದ ದಾಖಲೆ : ನಮೂನೆ–21 (ವಾಹನ ಮಾರಾಟ ಪತ್ರ) / ನಮೂನೆ–23 (ಹೊರ ರಾಜ್ಯದ ವಾಹನ ನೋಂದಣಿ ಪತ್ರ) /ಇತರೆ ದಾಖಲೆ
7. ಅರ್ಜಿದಾರರು ನಮೂದಿಸುವ ಬಿಡ್ ಮೊತ್ತ: ರೂ.____________

   ಬಿಡ್ ಮೊತ್ತ ಅಕ್ಷರಗಳಲ್ಲಿ : ________________________________
8. ಡಿಮಾಂಡ್ ಡ್ರಾಫ್ಟ್‌ಗಳ ಸಂಖ್ಯೆ ಮತ್ತು ವಿವರ: ಡಿ.ಡಿ.ನಂ.(1)________ದಿ:____________
   ಬ್ಯಾಂಕ್ ಹೆಸರು:____________________

   ಡಿ.ಡಿ.ನಂ.(2)________ದಿ:____________
   ಬ್ಯಾಂಕ್ ಹೆಸರು:____________________

ಮೇಲ್ಕಂಡ ಎಲ್ಲಾ ವಿವರಗಳು ಸತ್ಯವಾಗಿರುತ್ತವೆ ಮತ್ತು ಸದರಿ ನೋಂದಣಿ ಸಂಖ್ಯೆ ಹಂಚಿಕೆಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆ ನಿಯಮಗಳಿಗೆ ಒಳಪಟ್ಟು ಪ್ರಾಧಿಕಾರದ ಅಂತಿಮ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆಂದು ಘೋಷಿಸುತ್ತೇನೆ.

ಸ್ಥಳ: ______________

ದಿನಾಂಕ:______________ (ಅರ್ಜಿದಾರರ ಸಹಿ)

## ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 46-ಎಎ ಪ್ರಕಾರ ಹರಾಜು ಮೂಲಕ ಆಯ್ಕೆ ನೋಂದಣಿ ಸಂಖ್ಯೆ ಹಂಚಿಕೆಗಾಗಿ ಟೆಂಡರ್ ಅರ್ಜಿ

ಇವರಿಗೆ

ಸಾರಿಗೆ ಆಯುಕ್ತರು,
1ನೇ ಮಹಡಿ, ಟಿಟಿಎಂಸಿ ಕಟ್ಟಡ,
ಕೆ.ಹೆಚ್.ರಸ್ತೆ, ಶಾಂತಿನಗರ,
ಬೆಂಗಳೂರು-560 027.

ಮಾನ್ಯರೆ,

ಈ ಕೆಳಗೆ ಸಹಿ ಮಾಡಿರುವ ನಾನು, ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 46-ಎಎ ಪ್ರಕಾರ ಹರಾಜು ಮೂಲಕ ಲಘು ಮೋಟಾರು ವಾಹನಕ್ಕೆ (ಸಾರಿಗೇತರ ವರ್ಗ) ಆಯ್ಕೆ ನೋಂದಣಿ ಸಂಖ್ಯೆ ಹಂಚಿಕೆಗಾಗಿ ಕೆಳಕಂಡ ವಿವರಗಳೊಂದಿಗೆ ಅರ್ಜಿ ಸಲ್ಲಿಸುತ್ತಿದ್ದೇನೆ.

1. ಅರ್ಜಿದಾರರ ಹೆಸರು : ____________________
2. ವಿಳಾಸ : ____________________
____________________
____________________
3. ದೂರವಾಣಿ /ಮೊಬೈಲ್ ಸಂಖ್ಯೆ : ____________________
4. ಇ-ಮೇಲ್ ವಿಳಾಸ : ____________________
5. ಹಂಚಿಕೆ ಮಾಡಲು ಕೋರಿದ ನೋಂದಣಿ ಸಂಖ್ಯೆ (ಚಾಲ್ತಿ ಅಥವಾ ಆಯ್ಕೆ ಶ್ರೇಣಿ) : ____________________
6. ಪ್ರಾದೇಶಿಕ/ಸ. ಪ್ರಾದೇಶಿಕ ಸಾರಿಗೆ ಕಛೇರಿ ಹೆಸರು : ____________________
7. ಲಗತ್ತಿಸಿದ ದಾಖಲೆ : ನಮೂನೆ-21 (ವಾಹನ ಮಾರಾಟ ಪತ್ರ) /
ನಮೂನೆ-23 (ಹೊರ ರಾಜ್ಯದ ವಾಹನ ನೋಂದಣಿ ಪತ್ರ) /ಇತರೆ ದಾಖಲೆ
8. ಅರ್ಜಿದಾರರು ನಮೂದಿಸುವ
ಬಿಡ್ ಮೊತ್ತ : ರೂ.__________
ಬಿಡ್ ಮೊತ್ತ ಅಕ್ಷರಗಳಲ್ಲಿ : ____________________
9. ಡಿಮಾಂಡ್ ಡ್ರಾಫ್ಟ್‌ಗಳ ಸಂಖ್ಯೆ ಮತ್ತು ವಿವರ: ಡಿ.ಡಿ.ನಂ.(1)__________ದಿ:__________
ಬ್ಯಾಂಕ್ ಹೆಸರು:____________________

ಡಿ.ಡಿ.ನಂ.(2)__________ದಿ:__________
ಬ್ಯಾಂಕ್ ಹೆಸರು:____________________

ಮೇಲ್ಕಂಡ ಎಲ್ಲಾ ವಿವರಗಳು ಸತ್ಯವಾಗಿರುತ್ತವೆ ಮತ್ತು ಸದರಿ ನೋಂದಣಿ ಸಂಖ್ಯೆ ಹಂಚಿಕೆಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆ ನಿಯಮಗಳಿಗೆ ಒಳಪಟ್ಟು ಪ್ರಾಧಿಕಾರದ ಅಂತಿಮ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆಂದು ಘೋಷಿಸಿರುತ್ತೇನೆ.

ಬೆಂಗಳೂರು
ದಿನಾಂಕ:__________ (ಅರ್ಜಿದಾರರ ಸಹಿ)